ಪದಬಂಧ

# ಲೈಬ್ರರಿ ಆಫ್ ಕಾಂಗ್ರೆಸ್ ಏನು ವಿಶೇಷ?



ಅದೇನೇ ಇರಲಿ, ಒಂದಂಶ ಸ್ಪಷ್ಟ: 'ನಮ್ಮ ದೇಶದ ಕಾಂಗ್ರೆಸ್ ಪಕ್ಷಕ್ಕೂ, 'ಲೈಬ್ರರಿ ಆಫ್-ಕಾಂಗ್ರೆಸ್'ಗೂ ಯಾವ ಸಂಬಂಧವೂ ಕಿಂಚಿತ್ತೂ ಇಲ್ಲ.' ಹೆಸರೇ ಸೂಚಿಸುವಂತೆ ಅದೊಂದು ಗ್ರಂಥ ಭಂಡಾರ. ವಾಸ್ತವ ಏನೆಂದರೆ ಸರ್ವ ವಿಧಗಳಲ್ಲೂ ಈ ಗ್ರಂಥಾಲಯದ್ದು ಬೃಹತ್ ಅಂಕಿ-ಅಂಶಗಳ ವಿಶ್ವ ದಾಖಲೆ-ಜಗತ್ತಿನ ಸಕಲ ಗ್ರಂಥಾಲಯಗಳಲ್ಲೂ ಇದರದ್ದೇ ಗರಿಷ್ಠ ಗರಿಮೆಗಳ ಪ್ರಥಮ ಸ್ಥಾನ. ಯು.ಎಸ್.ಎ.ಯ ನ್ಯೂಯಾರ್ಕ್‌ನಲ್ಲಿರುವ ಈ ವಿಶ್ವ ಹಿರಿಮೆಯ ಲೈಬ್ರರಿಯ ವಿಶೇಷಗಳನ್ನು ಗಮನಿಸಿ:

* ಲೈಬ್ರರಿ ಆಫ್ ಕಾಂಗ್ರೆಸ್ 'ಜೇಮ್ಸ್ ಮ್ಯಾಡಿಸನ್ ಮೆಮೋರಿಯಲ್ ಬಿಲ್ಡಿಂಗ್'ನಲ್ಲಿ ನೆಲೆಗೊಂಡಿದೆ. ಈ ಕಟ್ಟಡದಷ್ಟು ವಿಸ್ತಾರದ 'ಏಕೈಕ ಗ್ರಂಥಾಲಯ' ಜಗತ್ತಿನಲ್ಲಿ ಇನ್ನೊಂದಿಲ್ಲ. ಈ ಕಟ್ಟಡದ ಎಲ್ಲ ಮಹಡಿಗಳ ಒಟ್ಟು ವಿಸ್ತೀರ್ಣ 26.5 ಲಕ್ಷ ಚದರ ಮೀಟರ್! ಎಂದರೆ 265 ಲಕ್ಷ ಚದರ ಅಡಿ!

* ಈ ಗ್ರಂಥಾಲಯದಲ್ಲಿರುವ ಪುಸ್ತಕಗಳ ಸಂಖ್ಯೆ ಎರಡು ಕೋಟಿಗೂ ಅಧಿಕ. ಇವುಗಳ ಶೇಕಡ 25 ಭಾಗ ಇಂಗ್ಲಿಷ್ ಭಾಷೆಯಲ್ಲಿದೆ. ಉಳಿದವು ಜಗತ್ತಿನ ಇಂಗ್ಲಿಷೇತರ 470 ವಿಭಿನ್ನ ಭಾಷೆಗಳಲ್ಲಿವೆ. ಕೇವಲ ಪುಸ್ತಕಗಳೇ ಅಲ್ಲದೇ ಇಲ್ಲಿ ನಾಲ್ಕು ದಶಲಕ್ಷ ಭೂಪಟಗಳಿವೆ. ಎಲ್ಲ ನಗರಗಳ ಸಂಪೂರ್ಣ ವಿವರದ, ಸಾಗರಗಳ ತಳದ ಮತ್ತು ಚಂದ್ರನ ಮೇಲ್ಮೈನ ಪಟಗಳೂ ಇಲ್ಲಿವೆ. ಈ ಲೈಬ್ರರಿಯಲ್ಲಿ ಒಂದು ಕೋಟಿ ಚಿತ್ರಗಳ ಸಂಗ್ರಹ ಇದೆ; ಮರ ಮತ್ತು ಲೋಹ ಕೆತ್ತನೆಯ ಒಂದು ಲಕ್ಷಕ್ಕೂ ಹೆಚ್ಚು ಚಿತ್ರಗಳು, ಎಪ್ಪತ್ತೈದು ಸಾವಿರ ಪೋಸ್ಟರ್‌ಗಳು ಇವೆ. ಸುಪ್ರಸಿದ್ಧ ಭಾಷಣಗಳ-ಹಾಡುಗಳ ಹದಿಮೂರು ಲಕ್ಷಕ್ಕೂ ಅಧಿಕ ಧ್ವನಿ ಮುದ್ರಣಗಳಿವೆ; ಹತ್ತಾರು ಸಾವಿರ ಚಲನಚಿತ್ರಗಳೂ ಇವೆ!

* ಇಷ್ಟನ್ನೆಲ್ಲ ಸಂಗ್ರಹಿಸಲು ಜೋಡಿಸಲಾಗಿರುವ ಕಪಾಟುಗಳ- ಕ್ಯಾಬಿನೆಟ್‌ಗಳ ಒಟ್ಟು ಉದ್ದ ಸಮೀಪ 925 ಕಿ.ಮೀ. ಆಗುವಷ್ಟಿದೆ! ಈ ಲೈಬ್ರರಿಗೆ ಜಗತ್ತಿನ ಎಲ್ಲೆಡೆಯಿಂದ ಪ್ರತಿದಿನ ಹತ್ತಾರು ಸಾವಿರ ಹೊಸ ಪ್ರಕಟಣೆಗಳು- ಗ್ರಂಥಗಳು, ಪುಸ್ತಕಗಳು, ನಿಯತಕಾಲಿಕಗಳು, ಭೂಪಟಗಳು ಚಿತ್ರಗಳು, ಧ್ವನಿ ಮುದ್ರಣಗಳು ಇತ್ಯಾದಿ- ಬಂದು ಸೇರುತ್ತವೆ. ಈ ಗ್ರಂಥಾಲಯವನ್ನು ನಿರ್ವಹಿಸಲು ಹದಿನೈದು ಸಾವಿರ ನೌಕರರಿದ್ದಾರೆ.

* ಈ ಲೈಬ್ರರಿಯಲ್ಲಿ ದೈತ್ಯ ವೈಶಾಲ್ಯದ 23 ವಾಚನಾಲಯಗಳಿವೆ. ಇಲ್ಲಿ ಕುಳಿತು ಪುಸ್ತಕ ಪತ್ರಿಕೆಗಳನ್ನು ಓದಬರುವ, ಈ ಅತ್ಯದ್ಭುತ ಗ್ರಂಥ ಭಂಡಾರವನ್ನು ನೋಡಬರುವ ಜನರ ಸಂಖ್ಯೆ ತಿಂಗಳಿಗೆ ಸರಾಸರಿ ಒಂದು ಲಕ್ಷ!

■ ಎನ್. ವಾಸುದೇವ್




ಎಡದಿಂದ ಬಲಕ್ಕೆ:

1. ಸದ್ಯದ ಅಪಾಯ ತಪ್ಪಿಸಲು ಒಳ್ಳೆಯ ತಂತ್ರ (4)
3. ಸಂಭ್ರಮದಿಂದ ಮರಸುತ್ತುತ್ತಿದೆ, ದುಂಬಿ (3)
4. ಒರಟುತನ ಬೇಡವೆಂದು ತೀವ್ರ ಒತ್ತಾಯ (3)
6. ಮೋಸದಾಟವನ್ನು ತಪ್ಪಿಸಿದ್ದು ಭಾರೀ ನೆಮ್ಮದಿ (4)
7. ಪ್ರಾಣಾಯಾಮ ಕಲಿಸುತ್ತಿದ್ದವನ ವಿವಾಹ ನಡೆದಿದೆ (4)
9. ಮೂರ್ಖರಿಗೆ ತಕ್ಕದ್ದಲ್ಲ ಬಿಡಿ, ಈ ಅಮೂಲ್ಯ ರತ್ನ (4)
11. ನೋವನ್ನಿತ್ತ ವ್ಯಕ್ತಿಗೆ ಬೆಣ್ಣೆ ಕೊಡಬೇಕೇ? (4)
13. ಆ ಹೆದ್ದಾರಿಯಲ್ಲಿ ಹೋಗಲು ಒಪ್ಪಿಗೆ ಪತ್ರ ಬೇಕು (4)
15. ಕರೀಕಲ್ಲಿನ ವ್ಯಾಪಾರದ ಲೆಕ್ಕ ಬರೆವ ಗುಮಾಸ್ತ (4)
17. ಅರ್ಥವನ್ನು ಪೂರ್ಣ ಮಾಡುವುದೂ ಅಭಿವೃದ್ಧಿಯೇ ತಾನೇ? (3)
18. ಜನಗಣತಿಗೂ ಬೇಕೇ ಬೇಕು ಲೆಕ್ಕಾಚಾರ ಶಾಸ್ತ್ರ (3)
19. ಗಣ್ಯರ ಆಗಮನಕ್ಕೆ ಮೊದಲು ಪ್ರದರ್ಶಿಸಿದ್ದು ಒಡವೆ-ಹಣ (4)

ಮೇಲಿಂದ ಕೆಳಕ್ಕೆ:

1. ಸಸ-ರಿರಿ ಹಾಡುತ್ತಲೇ ಇದೆಂಥ ವಿನೋದ! (3)
2. ಆ ಯುವಕನನ್ನು ನೋಡಿ-ಬೇರೆ ದೇಶದವ (3)
3. ಮಣಭಾರ ಹೊತ್ತು ಗಿರಿ ಗಿರಿ ಸುತ್ತುವುದೆಂದರೆ? (3)
5. ತಾತ್ಪರ್ಯ ತಿಳಿದೊಡನೆ ಹೆದರಿಕೆ-ನಡುಕ (3)
7. ಪಂಥಾಹ್ವಾನ ಸ್ವೀಕರಿಸಿ ಕೆಳಕ್ಕೆ ಬಿದ್ದ (3)
8. ಜಗನ್ಮಾತೆಯ ಪೂಜೆಯಲ್ಲಿ ಮೈಮರೆತವ ತಲೆ ಕೆಳಗು (3)
9. ಮುರಳೀಧರನ ಗಾನ, ಎಂಥ ಸಿಹಿ! (3)
10. ತಕರಾರಿನ ನಂತರ ಸಿಕ್ಕಿದ್ದು ಈ ಕಾಯಿಪಲ್ಲೆ (3)
12. ವ್ಯಾಪಾರ ನಿಂತದ್ದೇ ತಡ, ಪೂರ್ಣ ನಿಶ್ಶಬ್ದ (3)
14 ತರಹೇವಾರಿ ಸಾಧನಗಳು, ತುಂಬ ಚೂಪು (3)
15. ಕನ್ಯಾದಾನದ ನಂತರ ದಟ್ಟಡವಿ ಸೇರಿದ (3)
16. ಈ ನಾಣ್ಯಗಳ ಬೆಲೆ, ಲೆಕ್ಕಕ್ಕೂ ಬರದಷ್ಟು ಅಲ್ಪ, ಬಿಡಿ (3)

## 06-3-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನುಚಿತ; 3. ಪ್ರವೇಶ; 4. ನುಣುಪು; 6. ನಟರಾಜ; 7. ಆಪದ್ಧನ; 9. ಹಣಕಾಸು; 11. ಸುಖಾಸನ; 13. ನಕ್ಷತ್ರಕ; 15. ಕೆಡುನುಡಿ; 17. ಪಹರೆ; 18. ಹಣತೆ; 19. ತರತಮ (=ತಾರತಮ್ಯ).

ಮೇಲಿಂದ ಕೆಳಕ್ಕೆ:

1. ಅಶನ; 2. ತನುಜ; 3. ಪ್ರಸಿದ್ಧ; 5. ಪುರಾಣ; 7. ಆಸುಪಾಸು; 8. ನವಗಾನ; 9. ಹವಾಮಾನ; 10. ಸುರಲೋಕ; 12. ಸಲ್ಲಾಪ; 14. ಕ್ಷಮತೆ; 15. ಕೆರೆತ; 16. 'ಡಿಹಮ' (ಮಹಡಿ ತಲೆ ಕೆಳಗು).